ಮುಜರಾಯಿ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಅನುದಾನ

36 (140); ಡಾ॥ ಶಿವರಾಜ್ ಪಾಟೀಲ್ .ಎಸ್

ಅ) ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು ಮತ್ತು ಅವುಗಳಾವುವು (ವಿವರಗಳನ್ನು ನೀಡುವುದು):

ಆ) ಈ ದೇವಸ್ಥಾನಗಳ ಅಭಿವೃದ್ಧಿ ಅಥವಾ ಜೀರ್ಣೋದ್ಧಾರಕ್ಕಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಮೊತ್ತವೆಷ್ಟು (ದೇವಸ್ಥಾನಗಳವಾರು ಮಾಹಿತಿ ನೀಡುವುದು):

ಇ) ಈ ದೇವಸ್ಥಾನಗಳಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ದೇವಸ್ಥಾನಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ (ದೇವಸ್ಥಾನಗಳವಾರು ಮಾಹಿತಿ ನೀಡುವುದು):

ಈ) ಈ ದೇವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರ ನೀಡುವ ಅನುದಾನವನ್ನು ಸಕಾಲದಲ್ಲಿ ಖರ್ಚು ಮಾಡದೆ ಹಾಗೆ ಉಳಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರವು ನೀಡುವ ಅನುದಾನವನ್ನು ಸರಿಯಾದ ಸಮಯದಲ್ಲಿ ಬಳಕೆ ಮಾಡಿಕೊಳ್ಳದಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಹಾಗೂ ಮುಜರಾಯಿ ಸಚಿವರು)

ಅ) ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 8 ಮುಜರಾಯಿ ದೇವಸ್ಥಾನಗಳಿವೆ. ವಿವರ ಕೆಳಕಂಡಂತಿದೆ.

ಕ್ರ ಸಂ.	ಅಧಿಸೂಚನೆ/ ರಾಜ್ಯ ಪತ್ರಗಳಲ್ಲಿನ ಕ್ರಮಸಂಖ್ಯೆ	ಗ್ರಾಮ	ದೇವಸ್ಥಾನ
1	32	ರಾಯಚೂರು	ತಾತಕೋಟಿ ಆಂಜಿನಯ್ಯ ದೇವಸ್ಥಾನ
2	38	ಯಕ್ಲಾಸಪೂರು	ಬಸವಣ್ಣ ದೇವಸ್ಥಾನ
3	44	ಯಕ್ಲಾಸಪೂರು	ಹನುಮಾನ ದೇವಸ್ಥಾನ
4	57	ಯಕ್ಲಾಸಪೂರು	ಪ್ರಾಣದೇವರು ದೇವಸ್ಥಾನ
5	59	ರಾಂಪೂರು	ಹನುಮಾನ ದೇವಸ್ಥಾನ
6	78	ರಾಯಚೂರು	ತಾತಕೋಟಿ ಪ್ರಾಣದೇವರ ದೇವಸ್ಥಾನ.
7	94	ಮಲಿಯಾಬಾದ	ರಾಮಲಿಂಗೇಶ್ವರ ದೇವಸ್ಥಾನ
8	96	ಮಲಿಯಾಬಾದ	ಹನುಮಾನ ದೇವಸ್ಥಾನ

ಆ) ಈ ದೇವಸ್ಥಾನಗಳ ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕಾಗಿ ಕಳೆದ 3 ವರ್ಷಗಳಲ್ಲಿ ಒಟ್ಟು ₹. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದೆ.

ಈ ಅನುದಾನದಲ್ಲಿ ₹. 4.00 ಲಕ್ಷಗಳನ್ನು ಕಾಮಗಾರಿ ಕೈಗೊಳ್ಳುವ ಏಜೆನ್ಸಿಗೆ ಬಿಡುಗಡೆ ಮಾಡಿದ್ದು, ಉಳಿದ ಅನುದಾನವು ಜಿಲ್ಲಾಧಿಕಾರಿಗಳ ಅಭಿರಕ್ಷೆಯಲ್ಲಿದ್ದು, ಈ ಮೊತ್ತಕ್ಕೆ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ತಿಳಿಸಿರುತ್ತಾರೆ.

ಕ್ರ. ಸಂ	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಅನುದಾನದ ಮೊತ್ತ
1	ಬನವಣ್ಣ ದೇವಸ್ಥಾನ, ಯಕ್ಲಾಸಪೂರು	2.00 ಲಕ್ಷ
2	ರಾಮಲಿಂಗೇಶ್ವರ ದೇವಸ್ಥಾನ, ಮಲಿಯಾಬಾದ	2.00 ಲಕ್ಷ

3	ಹನುಮಾನ ದೇವಸ್ಥಾನ, ಯಕ್ಲಾಸಪೂರು	2.00 ಲಕ್ಷ
4	ಪ್ರಾಣದೇವರು ದೇವಸ್ಥಾನ ತಾತಕೋಟಿ, ರಾಯಚೂರು ನಗರ ಕ್ಷೇತ್ರ	2.00 ಲಕ್ಷ
5	ಹನುಮಾನ ದೇವಸ್ಥಾನ, ರಾಯಚೂರು	2.00 ಲಕ್ಷ

ಇ) ರಾಯಚೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮುಜರಾಯಿ ದೇವಾಲಯಗಳು 'ಸಿ' ವರ್ಗದ ದೇವಾಲಯಗಳಾಗಿದ್ದು, ಈ ದೇವಾಲಯಗಳಿಗೆ ವಾರ್ಷಿಕ ತಸ್ತಿಕ್ ಆದಾಯ ಹೊರತುಪಡಿಸಿ, ಬೇರೆ ಯಾವುದೇ ಆದಾಯವಿರುವುದಿಲ್ಲ.

ಸದರಿ ದೇವಾಲಯಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕುರಿತಂತೆ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.

ಈ) ಹೌದು.

ಉ) ಬಾಕಿ ಉಳಿದಿರುವ ಅನುದಾನವನ್ನು ಸಕಾಲದಲ್ಲಿ ವಿನಿಯೋಗಿಸಿಕೊಳ್ಳಲು ಜಿಲ್ಲಾಧಿಕಾರಿ, ರಾಯಚೂರು ಇವರಿಗೆ ಆಯುಕ್ತಾಲಯದಿಂದ ನಿರ್ದೇಶನ ನೀಡಲಾಗಿದೆ.

ಅಧಿವೇಶನದ ಸಂದರ್ಭದಲ್ಲಿ ನೀಡಲಾಗುವ ದಿನಭತ್ಯೆಗೆ ಅನುಸರಿಸಲಾಗುತ್ತಿರುವ ಮಾನದಂಡ

37 (141); ಡಾ॥ ಶಿವರಾಜ್ ಪಾಟೀಲ್ .ಎಸ್ (ರಾಯಚೂರು ನಗರ)

ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಮಾನ್ಯ ಶಾಸಕರುಗಳ ಆಪ್ತ ಸಹಾಯಕ ನೌಕರರುಗಳ ಸಂಖ್ಯೆ ಎಷ್ಟು;

ಆ) ಗುತ್ತಿಗೆ ನೌಕರರುಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅನುಸರಿಸಲಾಗಿರುವ ಮಾನದಂಡಗಳೇನು ಹಾಗೂ ಈ ನೌಕರರುಗಳ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳೇನು;